# ಶ್ರೀಶಾರದಾದೇವಿ ಅಂಧರ ವಿಕಾಸ ಕೇಂದ್ರ

"ಯಾರು ಪರರ ಹಿತಕ್ಕಾಗಿ ಬದುಕುತ್ತಾರೋ ಅವರೇ ಜೀವಂತರು, ಉಳಿದವರು ಜೀವಚ್ಛವಗಳು." ಶಕ್ತಿ ಮತ್ತು ಚೈತನ್ಯವನ್ನು ಬಡಿದೆಬ್ಬಿಸುವ ಸ್ವಾಮಿ ವಿವೇಕಾನಂದರ ಈ ನುಡಿಯ ಅಕ್ಷರಶಃ ಪಾಲನೆಯ ಫಲವೇ "ಶ್ರೀಶಾರದಾದೇವಿ ಅಂಧರ ವಿಕಾಸ ಕೇಂದ್ರ (ರಿ.)". ಅನುಪಿನಕಟ್ಟೆ ರಸ್ತೆ, ಗೋಪಾಳ, ಶಿವಮೊಗ್ಗದಲ್ಲಿರುವ ಈ ವಿಕಾಸಕೇಂದ್ರದ ವಿಶೇಷತೆಯೆಂದರೆ ಅಂಧರ ಬಾಳಿನಲ್ಲಿ ಜ್ಞಾನರವಿಯನ್ನು ಬೆಳಗಿಸುತ್ತಿರುವುದು.

'ಪ್ರತಿಕೂಲವಾದ ಸನ್ನಿವೇಶಗಳನ್ನು ಎದುರಿಸಿ ಜೀವಿಯು ವಿಕಾಸ ಮತ್ತು ಬೆಳವಣಿಗೆಯನ್ನು ಹೊಂದುವುದೇ ಜೀವನ" ಎಂಬ ಸ್ವಾಮಿ ವಿವೇಕಾನಂದರ ವಾಣಿಯ ಜ್ವಲಂತ ಮಾದರಿ ಯಾಗುತ್ತಾ, "ಜನಗಳಿಗೆ ಸ್ವಾವಲಂಬಿಗಳಾಗಲು ತಿಳಿಸದಿದ್ದಲ್ಲಿ ಇಡೀ ಜಗತ್ತಿನ ಎಲ್ಲಾ ಸಂಪತ್ತು ಕೂಡ ಒಂದು ಚಿಕ್ಕ ಹಳ್ಳಿಗೆ ಸಹಾಯ ನೀಡಲೂ ಸಾಕಾಗಲಾರದು" ಎಂಬ ಸ್ವಾಮಿಜಿಯ ನುಡಿಯನ್ನು ಆಚರಣೆಗೆ ತರಲು ಈ ಕೇಂದ್ರ ಪ್ರಯತ್ನಿಸುತ್ತಿದೆ. ಬೆಂಗಳೂರಿನ ರಾಮಕೃಷ್ಣ ಮಠದ ಸಂಪರ್ಕವನ್ನು ಹೊಂದಿದ್ದು ಸ್ವಾಮಿ ವಿವೇಕಾನಂದರ ಉದಾತ್ತ ಬೋಧನೆಗಳಿಂದ ಸ್ಫೂರ್ತಿ ಗೊಂಡಿದ್ದ ದಿವಂಗತ ಶ್ರೀ ಪದ್ಮನಾಭನ್ ಅವರ ನೇತೃತ್ವದಲ್ಲಿ ಕೆಲವು ಭಕ್ತರು ಒಂದಾಗಿ ಅಂಧರ ಸಮಾಜಕ್ಕೆ ಜ್ಞಾನದೀವಿಗೆ ಯನ್ನು ಬೆಳಗುವ ಹಣತೆಗಳಾದರು! ಈ ನಿಟ್ಟಿನಲ್ಲಿ ಅವರಿಟ್ಟ ಪ್ರಥಮ, ದಿಟ್ಟ ಹೆಜ್ಜೆಯ ಫಲವೇ "ಶ್ರೀಶಾರದಾದೇವಿ ಅಂಧರ ವಿಕಾಸ ಕೇಂದ್ರ". ಒಂದೇ ಒಂದು ಅಂಧ ಹೆಣ್ಣು ಮಗುವಿನಿಂದ ಕ್ರಿ.ಶ.೧೯೮೬ರಲ್ಲಿ ಹೊಸಮನೆ, ವಿನೋಬಾ ನಗರ ಮುಂತಾದ ಪ್ರದೇಶಗಳಲ್ಲಿ ಬಾಡಿಗೆ ಮನೆಯಲ್ಲಿ ಪ್ರಾರಂಭಗೊಂಡ ಈ ಕೇಂದ್ರ ಕ್ರಿ.ಶ.೧೯೯೩ರಲ್ಲಿ ಆರೂವರೆ ಎಕರೆ ಜಮೀನನ್ನು ಖರೀದಿಸಿ ಸಮಾಜದ ೧೧೩ ಮಕ್ಕಳಿಗೆ ಆಶ್ರಯಸ್ಥಾನವಾಗಿದೆ. ದೃಷ್ಟಿಯಿದ್ದೂ ಕುರುಡರಂತೆ ಬದುಕು ತ್ತಿರುವವರನ್ನು ನಾಚಿ ತಲೆತಗ್ಗಿಸುವಂತೆ ಮಾಡಿದ್ದಾರೆ ಈ ಕೇಂದ್ರದ ಆಡಳಿತವರ್ಗದವರು.

೪೪ ಬಾಲಕಿಯರು, ೬೯ ಬಾಲಕರಿಗೆ ಶಿಶುವಿಹಾರದಿಂದ ಹತ್ತನೇ ತರಗತಿಯವರೆಗೆ ಉಚಿತ ವಿದ್ಯಾಭ್ಯಾಸದ ಜೊತೆಗೆ ಉಚಿತ ಭೋಜನ, ವೈದ್ಯಕೀಯ ಸೌಲಭ್ಯ ಹಾಗೂ ವಸತಿ ಯನ್ನೂ ಕೇಂದ್ರ ನೀಡುತ್ತಿದೆ. ಈ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುವ ಹದಿನೈದು ಜನ ಸ್ವಯಂಸೇವಕ, ಸೇವಕಿಯರ ನಿರಂತರ, ನಿಃಸ್ವಾರ್ಥ ಪರಿಶ್ರಮ ಉಲ್ಲೇಖನೀಯ. "ನಮಗೆ ಇಂದು ಅವಶ್ಯವಾಗಿ ಬೇಕಾಗಿರುವುದು ಜನ, ಜನ. ಉಳಿದವೆಲ್ಲ ಅನಂತರ ಬರುವುವು. ವೀರ್ಯವಾನ್, ತೇಜಸ್ವಿ, ಶ್ರದ್ಧಾ ಸಂಪನ್ನ, ಕೊನೆಯವರೆಗೂ ನಿಷ್ಕಪಟಿಗಳಾದ ಯುವಕರು ಬೇಕಾಗಿದ್ದಾರೆ. ಇಂತಹ ನೂರು ಜನ ಸಿಕ್ಕಿದರೆ ಪ್ರಪಂಚವನ್ನೇ ಬದಲಾಯಿಸಬಹುದು" ಎಂಬ ವಿವೇಕಾನಂದರ ನುಡಿಯು ಇಲ್ಲಿ ಗಮನಾರ್ಹವಾದುದು. ದೈಹಿಕ ದೃಢತೆಗಾಗಿ ನಿಯಮಿತ ಯೋಗಾಸನ, ವ್ಯಾಯಾಮ, ಕ್ರಿಕೆಟ್ ಮತ್ತು ಇನ್ನಿತರ ಆಟಗಳಲ್ಲೂ ಮಕ್ಕಳಿಗೆ ಪರಿಣತಿ ದೊರೆಯುತ್ತಿದೆ. ಇತ್ತೀಚೆಗೆ ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಲು ದೆಹಲಿ ಯವರೆಗೆ ಹೋಗಿದ್ದರು ಈ ಅಂಧ ಪುಟಾಣಿಗಳು! ಭಾವನಾತ್ಮಕ ಆವಶ್ಯಕತೆಗಳಿಗೆ ಸ್ಪಂದಿಸುವಂತಹ ನೃತ್ಯ, ನಾಟಕ, ಸಂಗೀತ, ತಬಲಾ, ಕೋಲಾಟ ಮತ್ತು ಯಕ್ಷಗಾನಗಳನ್ನೂ ಈ ಮಕ್ಕಳಿಗೆ ಕಲಿಸಿಕೊಡಲಾಗುತ್ತದೆ. ದೂರದರ್ಶನದಲ್ಲಿ ಇವರಿಂದ ಪ್ರಸ್ತುತವಾದ ಯಕ್ಷಗಾನವನ್ನು ವೀಕ್ಷಿಸಿದ ನೂರಾರು ಪ್ರೇಕ್ಷಕರ ಮೆಚ್ಚುಗೆಗೆ ಇವರು ಪಾತ್ರರಾಗಿದ್ದಾರೆ. ಬೌದ್ಧಿಕ ಬೆಳವಣಿಗೆಗಾಗಿ ಕಂಪ್ಯೂಟರ್‌ನಲ್ಲಿ ಬ್ರೈಲ್ ವಿದ್ಯೆಯ ಪರಿಣತಿ ಹಾಗೂ ಪ್ರತಿ ನಿತ್ಯ ಇಪ್ಪತ್ತು ನಿಮಿಷಗಳು ಸಮಾಚಾರ ಪತ್ರಿಕೆಗಳಿಂದ ಪ್ರಪಂಚದ ಆಗುಹೋಗುಗಳ ಬಗ್ಗೆ ಮಾಹಿತಿ ಯನ್ನೂ ನೀಡಲಾಗುತ್ತದೆ. ದೈಹಿಕ, ಬೌದ್ಧಿಕ, ಭಾವನಾತ್ಮಕ ಬೆಳವಣಿಗೆಯು ಫಲದಾಯಕವಾಗಲು ಆಧ್ಯಾತ್ಮಿಕತೆಯೆಡೆಗೂ ಗಮನವೀಯುವ ಶಿಸ್ತೇ ಕೇಂದ್ರದ ಪುರೋಭಿವೃದ್ಧಿಗೆ ಕಾರಣ ವೆನ್ನಬಹುದು. ಪ್ರತಿನಿತ್ಯ ಭಜನೆ, ಧ್ಯಾನ, ದಿವ್ಯತ್ರಯರ ಪುಸ್ತಕ ಗಳಿಂದ ಪಠನ, ಆಗಾಗ್ಗೆ ವಿವಿಧ ಸಂಪ್ರದಾಯಗಳ ಸ್ವಾಮಿಜಿ ಗಳಿಂದ ನಿಯಮಿತ ಸತ್ಸಂಗ ಮುಂತಾದ ಚಟುವಟಿಕೆಗಳನ್ನು ಆಯೋಜಿಸಲಾಗುತ್ತದೆ. ಇಷ್ಟೇ ಅಲ್ಲದೆ ಮಕ್ಕಳ ಭವಿಷ್ಯ ಜೀವನಕ್ಕಾಗಿಯೂ ಕಾಳಜಿ ವಹಿಸುವ ಅವರ ನಿಃಸ್ವಾರ್ಥತೆ, ದೂರದೃಷ್ಟಿ ಸ್ತುತ್ಯರ್ಹ. ಹತ್ತನೇ ತರಗತಿಯ ನಂತರ ಬಾಹ್ಯ ಜಗತ್ತಿಗೆ ಕಾಲಿಡುವ ಈ ಮಕ್ಕಳ ಜೀವನ ಹಸನಾಗಿರಲೆಂದು ಹಿರಿಯ ಅಂಧ ವಿದ್ಯಾರ್ಥಿಗಳಿಗಾಗಿ ಪ್ಲಾಸ್ಟಿಕ್ ಮೌಲ್ಡಿಂಗ್, ಬಾಕ್ಸ್‌ಗಳ ತಯಾರಿಕೆ, ಆಭರಣಗಳ ಬಾಕ್ಸ್‌ಗಳ ತಯಾರಿಕೆ, ಮೋಂಬತ್ತಿ, ಫಿನಾಯಿಲ್ ತಯಾರಿಕೆ, ಮುಂತಾದ ಗೃಹ ಕೈಗಾರಿಕಾ ಕುಶಲಗಳೇ ಅಲ್ಲದೆ ಗೋಶಾಲೆಯ ನಿರ್ವಹಣೆ, ಕೃಷಿ ಮತ್ತು ತೋಟಗಾರಿಕೆ ಮುಂತಾದವುಗಳಲ್ಲಿಯೂ ತರಬೇತಿ ಯನ್ನು ನೀಡಲಾಗುತ್ತದೆ.


ದೈನಂದಿನ ಚಟುವಟಿಕೆಗಳನ್ನು ಉತ್ಸಾಹದಿಂದ ಪಾಲಿಸುತ್ತ,

ಎಲ್ಲರಂತೆ ಓಡುತ್ತ, ಆಡುತ್ತ, ನಲಿಯುತ್ತ, ಜೀವನದ ಸೊಬಗನ್ನು ಸವಿಯಲು ಕಾತರರಾಗಿರುವ ಈ ಮಕ್ಕಳನ್ನು ಕಂಡು ಆಶ್ಚರ್ಯವಾಗುತ್ತದೆ. ಎಲ್ಲಿ ಬೀಳುವರೋ ಎಂದು ನೋಡುವವರಿಗೆ .ಭಯವಾಗಬಹುದು. ಆದರೆ ಅವರಿಗೆ ಉತ್ತಮವಾದ ಸೂಕ್ಷ್ಮಗ್ರಹಿಕೆಯಿದೆ. ಒಮ್ಮೆ ಮುಟ್ಟಿದರೆ ಸಾಕು, ಕೇಳಿದರೆ ಸಾಕು, ಮರೆಯುವುದೇ ಇಲ್ಲ. ಪ್ರೀತಿ, ಮಮತೆಗಳನ್ನು ಸದಾ ತಮ್ಮಲ್ಲಿ ಹಾಗೂ ಇತರರೊಂದಿಗೆ ವ್ಯಕ್ತಪಡಿಸುವ ಈ ಮಕ್ಕಳು ದೇವರ ಪ್ರತಿರೂಪಗಳೇ. ನಡೆದಾಡುವ ದೇವರಿವರು. ಪ್ರಾತಃಕಾಲ ಆರು ಘಂಟೆಗೇ ಉಷಾಕೀರ್ತನೆಯಲ್ಲಿ ದಿವ್ಯತ್ರಯರಿಗೆ "ಬೆಳಗಾಯಿತು ಏಳಿ!" ಎಂದು ತಮ್ಮ ಸುಶ್ರಾವ್ಯ ಕಂಠದಿಂದ, ಒಕ್ಕೊರಲಿನಿಂದ ಸುಪ್ರಭಾತ ಹಾಡುವ, ಜಗತ್ತಿನ ಮಂಗಲಕ್ಕಾಗಿ **ಸರ್ವಸ್ತರತು ದುರ್ಗಾಣಿ... ತಮಸೋ ಮಾ ಜ್ಯೋತಿರ್ಗಮಯ...** ಎಂದು ಪ್ರಾರ್ಥಿಸುವ ಈ ಮಕ್ಕಳ ಕಾರ್ಯಕ್ರಮಗಳನ್ನು ವೀಕ್ಷಿಸುವ ಸೌಭಾಗ್ಯವು ಈ ಲೇಖಕಿಗೆ ಒದಗಿ, "ನಾನೇನು ಅಂಧರ ಜಗತ್ತಿನಿಂದ ದಿವ್ಯದೃಷ್ಟಿಯುಳ್ಳವರ ಕೇಂದ್ರಕ್ಕೆ ಬಂದಿಹೆನೋ" ಎಂದುಲಿದ ಮನದ ಪ್ರತಿಧ್ವನಿಯನ್ನು ಆಲಿಸದಿರಲಾಗಲಿಲ್ಲ. ಸ್ವಾಮಿ ಯತೀಶ್ವರಾನಂದಜಿಯವರ ಹೆಸರಿನಲ್ಲಿ ಹೆಣ್ಣು ಮಕ್ಕಳಿಗೆ ವಸತಿಯನ್ನು ಕಲ್ಪಿಸಿರುವ ಸ್ವಾಮಿ ಪ್ರಬುದ್ಧಾನಂದಜಿ ಅವರ ಉದಾರ ಕೊಡುಗೆಯನ್ನು ಇಲ್ಲಿ ಸ್ಮರಿಸಲೇಬೇಕು. "ಹಣದಿಂದ ಪ್ರಯೋಜನವಿಲ್ಲ, ಹೆಸರಿನಿಂದಲೂ ಪ್ರಯೋಜನವಿಲ್ಲ, ಕೀರ್ತಿ, ಪಾಂಡಿತ್ಯದಿಂದಲೂ ಇಲ್ಲ... ಯಾರ ಪ್ರೇಮ ನಿಃಸ್ವಾರ್ಥ ನಂದಾದೀವಿಗೆಯಂತೆ ಉರಿಯುತ್ತಿದೆಯೋ ಅದು ಜಗತ್ತಿಗೆ ಬೇಕಾಗಿದೆ" ಎನ್ನುವ ವಿವೇಕಾನಂದರ ವಾಣಿ ಎಷ್ಟು ಸಮಂಜಸವಲ್ಲವೇ? ಅಂಧ ಮಕ್ಕಳನ್ನು ಹೆತ್ತ ತಂದೆ ತಾಯಂದಿರು ತಮ್ಮ ಹಾಗೂ ಮಕ್ಕಳ ಜೀವನವೇ ಅಂಧಕಾರದಲ್ಲಿ ಮುಳುಗಿಹೋಯಿತೆಂದು ದುಃಖಿಸದೆ ಈ ಸಂಸ್ಥೆಯನ್ನು ಸಂಪರ್ಕಿಸಬಹುದು. "ದೀನದಲಿತರ ಸೇವೆಯೇ ದೇವರ ಸೇವೆ" ಎಂದು ಅರಿತು ಉದಾರ ಮನೋಭಾವದಿಂದ ಈ ಸಂಸ್ಥೆಗೆ ದಾನಿಗಳು ನೀಡುವ ಕೊಡುಗೆ ಸಾರ್ಥಕವಾಗುತ್ತದೆ.

(ವರದಿ : ಕುಮಾರಿ ಸ್ವರ್ಣಗೌರಿ)



ಅಂಧತೆಯು ಕಂಪ್ಯೂಟರ್ ಕಲಿಕೆಗೆ ಬಾಧಕವಲ್ಲ ಎಂದು ಮಕ್ಕಳು ಸಾಬೀತುಗೊಳಿಸುತ್ತಿದ್ದಾರೆ. ಮಧ್ಯದಲ್ಲಿರುವುದು ಮುದ್ರಣ ಯಂತ್ರ.



ಮಕ್ಕಳು ಕೋಲಾಟದಲ್ಲಿ ನಿರತರಾಗಿರುವುದು.



ಮಕ್ಕಳೆಲ್ಲ ಸಾಮೂಹಿಕ ಹಾಡನ್ನು ಹಾಡುತ್ತಿರುವ ದೃಶ್ಯ



ಶಿಸ್ತಿನಿಂದ ಶಾಂತಚಿತ್ತರಾಗಿ ಊಟ ಸವಿಯುತ್ತಿರುವ ದೃಶ್ಯ